ಹಸ್ತಪ್ರತಿ - 1


**ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ**

ಹೆಸರುಘಟ್ಟ, ಬೆಂಗಳೂರು - 560 089.

**ಕರ್ನಾಟಕ ರಾಜ್ಯ ಔಷಧಿ ಗಿಡಮೂಲಿಕಾ ಪ್ರಾಧಿಕಾರ**

ಬೆಂಗಳೂರು - 560 003.


# ಕರ್ನಾಟಕ ರಾಜ್ಯ ಬೆಟ್ಟದ ನೆಲ್ಲಿ ಪ್ರಚಾರಾಂದೋಲನ




ಫೆಬ್ರುವರಿ 2011

**ಕೃಷಿ ವಿಜ್ಞಾನ ಕೇಂದ್ರ**

ಓರೇಹಳ್ಳಿ, ತುಮಕೂರು - 572 168.

ಪ್ರತಿಗಳು : 1500

# ಕರ್ನಾಟಕ ರಾಜ್ಯ ಬೆಟ್ಟದ ನೆಲ್ಲಿ ಪ್ರಚಾರಾಂದೋಲನ

ಬೆಟ್ಟದ ನೆಲ್ಲಿ ಸಸ್ಯವು ನಿತ್ಯ ಹಸುರಿನ ಸಣ್ಣ ಅಥವಾ ಮಧ್ಯಮ ಗಾತ್ರದ ಮರವಾಗಿದ್ದು ಮುಖ್ಯವಾಗಿ ನಮ್ಮ ದೇಶದ ಕಾಡು ಮತ್ತು ಬೆಟ್ಟ ಗುಡ್ಡಗಳಲ್ಲಿ ಇದರ ಮರಗಳು ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ನೆಲ್ಲಿಯನ್ನು ' ಆಮ್ಲ' ಅಥವಾ 'ಇಂಡಿಯನ್ ಗೂಸ್‌ಬೆರ್ರಿ' ಎಂಬ ಹೆಸರುಗಳಿಂದ ಕರೆಯಲಾಗುತ್ತಿದ್ದು ,ಹಣ್ಣು ಹಸಿರಿನಿಂದ ಕೂಡಿದ್ದು ಪಕ್ವವಾದಂತೆ ತಿಳಿ ಹಳದಿ ಅಥವಾ ಇಟ್ಟಿಗೆ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಈ ಬೆಟ್ಟದ ನೆಲ್ಲಿಯನ್ನು ಹಲವಾರು ವರ್ಷಗಳಿಂದ ಮನೆಯಲ್ಲಿ ತಯಾರಿಸುವ ಹಲವಾರು ಔಷಧಿಗಳಿಗೆ ಉಪಯೋಗಿಸುತ್ತಾರೆ. ಮುಖ್ಯವಾಗಿ ಆಯುರ್ವೇದ ಔಷಧಿಗಳಾದ ಚವನ್ ಪ್ರಾಶ್, ತ್ರಿಫಲ್ ಚೂರ್ಣ,ಬ್ರಹ್ಮ ರಸಾಯನ ಮತ್ತು ಮಧುಮೇಹ ಚೂರ್ಣಗಳ ತಯಾರಿಕೆಯಲ್ಲಿ ಬಳಸುತ್ತಾರೆ.ಅಲ್ಲದೇ ದಿನನಿತ್ಯ ಉಪಯೋಗಿಸಲ್ಪಡುವ ಆಹಾರಗಳಾದ ಉಪ್ಪಿನಕಾಯಿ, ಮೊರಬ್ಬ, ಮತ್ತು ಒಣಗಿಸಿದ ಸುಫಾರಿಗಳನ್ನು ತಯಾರಿಸುತ್ತಾರೆ, ಪ್ರತಿ ನೂರು ಗ್ರಾಂ. ಆಮ್ಲದ ಹಣ್ಣಿನಲ್ಲಿ 700 ಮಿ.ಲಿ.ಗ್ರಾಂ. 'ಸಿ' ಜೀವಸತ್ವ ಹೊಂದಿದೆ. ಆದ್ದರಿಂದ ಹಲವಾರು ಕೈಗಾರಿಕೆಗಳ ಬಹು ಬೇಡಿಕೆಯಲ್ಲಿರುವ ಹಣ್ಣಾಗಿದ್ದು ಮುಖ್ಯವಾಗಿ ಕೇಶವರ್ಧಕ ಉತ್ಪಾದನೆಗಳಾದ ಎಣ್ಣೆ, ಶ್ಯಾಂಪೂ ಮತ್ತು ಬಣ್ಣಗಳ ತರಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಈ ಹಣ್ಣಿನ ಮಹತ್ವವನ್ನು ಅರಿತು ಭಾರತ ಸರ್ಕಾರವು ರಾಷ್ಟ್ರೀಯ ಗಿಡಮೂಲಿಕಾ ಸಸ್ಯಗಳ ಮಂಡಳಿಯ ಮುಖಾಂತರ ಈ ಸಸ್ಯವನ್ನು ಪೋಷಿಸಿ ಪ್ರಚಾರ ಪಡಿಸಲು ಯೋಜನೆಯನ್ನು ಹಮ್ಮಿಕೊಂಡಿದ್ದು ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಗಿಡಮೂಲಿಕಾ ಪ್ರಾಧಿಕಾರದ ಮುಖಾಂತರ ಅನುಷ್ಠಾನಗೊಳಿಸ ಲಾಗುತ್ತಿದೆ.

**ಯೋಜನೆಯ ಧ್ಯೇಯೊದ್ದೇಶಗಳು:**

1. ರಾಜ್ಯದ ಹಲವಾರು ಭಾಗಗಳಿಗೆ ಹೊಂದಾಣಿಕೆಯಾಗುವಂತಹ ಮತ್ತು ಹೆಚ್ಚು 'ಸಿ' ಜೀವಸತ್ವ ಹೊಂದಿರುವ ಸಸಿಗಳನ್ನು ಬೆಳೆಸುವುದು.
2. ಬೆಟ್ಟದ ನೆಲ್ಲಿಯ ಸುಸ್ಥಿರ ಕೃಷಿ ಮತ್ತು ಸಂಸ್ಕರಣೆಗೆ ಒತ್ತು ನೀಡುವುದು.
3. ಹಲವಾರು ವಿಸ್ತರಣಾ ಪದ್ಧತಿಗಳಾದ ತರಬೇತಿ

ಕಾರ್ಯಕ್ರಮಗಳು.ಜಾಗ್ರತ್ರಿ ಕಾರ್ಯಕ್ರಮಗಳು ಮತ್ತು ದೃಶ್ಯ ಮಾಧ್ಯಮಗಳ ಮುಖಾಂತರ ಬೆಟ್ಟದ ನೆಲ್ಲಿ ಸಸ್ಯ ಮತ್ತು ಅದರ ಉಪಯೋಗಗಳ ಬಗ್ಗೆ ಅರಿವು ಮೂಡಿಸುವುದು.

4. ವಿಸ್ತರಣಾ ಹಸ್ತ ಪ್ರತಿಗಳನ್ನು ಮುದ್ರಿಸಿ ಹಂಚುವುದು.

ಈ ಯೋಜನೆಯನ್ನು ಮೂರು ವಿವಿಧ ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**1. ರಾಜ್ಯ ಮಟ್ಟದ ಬೆಟ್ಟದನೆಲ್ಲಿ ಪ್ರಚಾರಾಂದೋಲನ :** ಈ ಯೋಜನೆಯನ್ನು ರಾಜ್ಯ ಮಟ್ಟದಲ್ಲಿ ಸಹಾಯಕ ಬೆಟ್ಟದ ನೆಲ್ಲಿ ಸಂಯೋಜಕರು ಅನುಷ್ಠಾನಗೊಳಿಸುತ್ತಿದ್ದು, ಮುಖ್ಯವಾಗಿ ಆಕಾಶವಾಣಿ, ದೂರದರ್ಶನ ಮತ್ತು ದಿನಪತ್ರಿಕೆ ಗಳ ಮುಖಾಂತರ ಬೆಟ್ಟದ ನೆಲ್ಲಿ ಮಹತ್ವ ಮತ್ತು ಅವುಗಳ ಉಪಯೋಗಳ ಬಗ್ಗೆ ರಾಜ್ಯದ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.

**2. ಜಿಲ್ಲಾ ಮಟ್ಟದ ಬೆಟ್ಟದನೆಲ್ಲಿ ಪ್ರಚಾರಾಂದೋಲನ:** ಈ ಯೋಜನೆಯನ್ನು ತುಮಕೂರು ಜಿಲ್ಲೆಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರ, ಹಿರೇಹಳ್ಳಿ ಇವರ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯ ಗಿಡಮೂಲಿಕಾ ಪ್ರಾಧಿಕಾರದ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

**3. ಬೆಟ್ಟದ ನೆಲ್ಲಿ ಮೌಲ್ಯವರ್ಧನೆ ಪ್ರಚಾರಾಂದೋಲನ:** ಈ ಯೋಜನೆಯನ್ನು ಆಯ್ದ ಎರಡು ಕೃಷಿ ವಿಜ್ಞಾನ ಕೇಂದ್ರಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದ್ದು, ಮುಖ್ಯವಾಗಿ ಬೆಟ್ಟದ ನೆಲ್ಲಿ ಮೌಲ್ಯವರ್ಧಿತ ಉತ್ಪನ್ನಗಳಾದ ಉಪ್ಪಿನಕಾಯಿ, ಮೊರಬ್ಬ ,ಒಣಗಿಸಿದ ಸುಫಾರಿ, ನೆಲ್ಲಿ ಪಾನೀಯ, ನೆಲ್ಲಿ ಜ್ಯಾಮ್ ಪದಾರ್ಥಗಳನ್ನು ಪ್ರಾತ್ಯಕ್ಷಿಕೆ ಮತ್ತು ತರಬೇತಿ ಕಾರ್ಯಕ್ರಮಗಳ ಮುಖಾಂತರ ಪ್ರಚಾರ ಪಡಿಸುವುದು.

**ಯೋಜನೆಯ ವೆಚ್ಚ :** ಈ ಯೋಜನೆಯ ವೆಚ್ಚ 295 ಲಕ್ಷ ರೂ. ಗಳಾಗಿದ್ದು , ರಾಷ್ಟ್ರೀಯ ಗಿಡಮೂಲಿಕಾ ಮಂಡಳಿಯಿಂದ ಈಗಾಗಲೇ ಮಂಜೂರಾತಿ ದೊರಕಿದ್ದು ಮುಂದಿನ ಮೂರು ವರ್ಷಗಳ ವಿವಿಧ ಹಂತಗಳಲ್ಲಿ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಂಗಳೂರುರವರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

# KARNATAKA STATE AMLA CAMPAIGN

Amla is botanically known as Emblica officinalis. Emblica is a small genus of trees, native to India, Ceylon and China. Emblica officinalis commonly known as Amla or Indian Gooseberry or Nelli .The amla fruit is green when tender, changing to light yellow or brick red colour when mature. It is sour and astringent and is occasionally eaten raw. The amla fruit is used successfully in the treatment of human scurvy. Amla fruit has been held in high esteem in indigenous medicine. It has wide application in food as curry and pickles and in cosmetics preparation as herbal shampoo, hair oil, herbal hair dye and many other items. Commercially, it also has a high demand. The Amla fruit has the richest natural source of vitamin-C (700 mg per 100 g of fruits) and is considered to be a good liver tonic. The various preparations using Amla include Chyavanprash, Triphala churna (mixture of Amla, Terminalia chebula and T.bellerica), Brahma Rasayana and Madhumegha churna. It has good demand from the industries for the preparation of various health care products like hair oil, dye, shampoo, face creams and tooth powder.

Since, Amla is useful in many ways and is a rich source of Vitamin 'C', it is a good health supplement for children. In order to popularize this plant and make the fruit available for children, NMPB has initiated a National level programme to promote and propagate Amla in schools and other organizations.

**Objectives:**

1. Raising of Amla seedlings having high vitamin 'C' content and suitable to agro climatic region of the locality.
2. Endeavour to ensure sustained cultivation and processing of Amla after the project period.

3. Mass campaign through various extension methods viz.., training programmes, awareness programmes, competition among the students and employing all audio-visual aids to popularize the Amla plant.
4. Preparation of folders, leaflets and other extension literature for publicity.
5. Campaign through Television, Radio and Print Media (Mass Communication).


It will be implemented in three manner

**Amla campaign at the state level: -** The state level Amla Campaign will be implemented Asst. Amla project Coordinator, KVK, Tumkur by involving All India Radio, Doordarshan and Local Newspapers to create the awareness about the importance of Amla and its uses.

**Amla campaign at the District level:-** At the district level the programme will be implemented through the Krishi Vigyan Kendra (KVK), Hirehalli for Tumkur district This Project is being implemented in colabration with Karnataka Medicinal Plants Authority as a network project.

**Value addition to Amla:-** This component will be implemented through two selected KVKs having full fledged staff and infrastructure in the field of Home Science. The selected KVKs will conduct demonstrations/skill oriented trainings on preparations of jam, murabbas, Amla juice etc. and other products derived from Amla.

**Budget:** The Budget of Rs.295 lakh was sanctioned by National Medicinal Plants Board (NMPB) for three years.








ಲೇಖಕರು :

ಶ್ರೀ ಜೆ.ಎಂ. ಪ್ರಶಾಂತ್

ಶ್ರೀ ಸಣ್ಣಮಂಜುನಾಥ ಕೆ.ಎಸ್.

ಶ್ರೀ ಎಂ. ಶಿವಶಂಕರ ಮೂರ್ತಿ

ಶ್ರೀ ಡಾ. ಸೋಮಶೇಖರ್

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ,
ಹಿರೇಹಳ್ಳಿ, ತುಮಕೂರು. ಫೋನ್ : 0816-2243214



Balaji Printers 9449684837